ಮುರಿದು ಬಿದ್ದಿರೋರ್ಗೆ ಹೊಸ ಜೀವನ ಕಲ್ಪಿಸಬೇಕೂಂತಾನೆ ಇದಕ್ಕೆ ಹೊಸ ಜೀವನ ಡಾಟ್ ಕಾಂ ಅಂತ ಹೆಸರಿಟ್ಟಿರೋದು. ನೀವು ಮೂರು ಮದುವೆ ಆಗಿ ಮೂರು ಜನರನ್ನು ಬಿಟ್ಟು ಈಗ ನಾಲ್ಕನೇದಕ್ಕೆ ಟ್ರೈ ಮಾಡ್ತೀದೀರಾ... ನಿಮಗ್ಯಾಕ್ರಿ ವರ್ಜಿನ್ ಬೇಕು? ನೀವೇನು ಫ್ರೆಶರ್ರಾ... ಮದ್ವೆ ಆಗೋ ಹುಡುಗೀನೂ ಅದನ್ನೇ ಕೇಳಿದ್ರೆ" ಎಂದೆ.

"ಓ ಗಾಡ್! ಎಂಥಾ ಹೆಂಗಸಪ್ಪಾ ನೀವು, ನಾನೊಂದು ಜೋಕ್ ಮಾಡಿದ್ರೆ ಅದನ್ನು ಅರ್ಥ ಮಾಡಿಕೊಳ್ಳಕ್ಕೆ ನಿಮ್ಗೆ ಬರಲ್ವಾ? ಒಂದಿಷ್ಟು ಸೆನ್ಸ್ ಆಫ್ ಹ್ಯೂಮರ್ರ್ ಇಲ್ವಲ್ರೀ ನಿಮ್ಗೆ... ಅಲ್ಲ ನಾನೇನು ನಿಮ್ಮ ಕಣ್ಗೆ ಅಷ್ಟು ಫನ್ನಿಯಾಗಿ ಕಾಣ್ತೀದೀನಾ? ನಾನೇ ಮೂರು ಜನರ ಜೊತೆ ಸಂಸಾರ ಮಾಡಿ ನನಗೆ ಕನ್ಯೆ ಬೇಕು ಅನ್ನೋಕೆ ನಂಗೇನು ತಲೆ ಕೆಟ್ಟಿದೆಯಾ? ಹೋಗ್ಲಿ ಬಿಡಿ. ನಿಮ್ಮ ಕೋಪದ ರುಚಿ ನೋಡಿದಂಗಾಯ್ತು. ಹೋಗ್ಲಿ ಯಾರಾರೂ ಸೂಟೆಬಲ್ ಇದಾರೇನ್ರಿ... ಹೇಳಿ ಮತ್ತೆ" ಎಂದ.

"ಈಗ ತಾನೆ ಒಂದು ರೌಂಡ್ ಮಾತುಕತೆ ಆಡಿದೀವಿ. ನಾಳೆಯೊಳಗೆ ನಮ್ಮ ಫೈಲ್‌ಗಳನ್ನು ತೆಗೆದು ಯಾವುದಾದ್ರೂ ಹೊಂದುವಂಥದ್ದು ಇದ್ರೆ ಸಜೆಸ್ಟ್ ಮಾಡ್ತೀನಿ. ನಾಳೆ ಸಂಜೆ ನೀವು ಇದೇ ಟೈಮ್‌ಗೆ ಆಫೀಸಿಗೆ ಬನ್ನಿ" ಎಂದೆ.

"ಅಲ್ಲರೀ... ಅಷ್ಟೊತ್ತಿಂದ ಮಾತಾಡ್ತಾನೇ ಇದೀನಿ ಒಂದು ಟೀನೂ ತರಿಸ್ಲಿಲ್ಲವಲ್ರೀ. ನಿಮ್ಮ ಆಫೀಸಲ್ಲಿ ಅದೆಲ್ಲಾ ಅಭ್ಯಾಸ ಇಲ್ವಾ? ಹೆಂಗೂ ಚೆನ್ನಾಗಿ ಚಾರ್ಜ್ ಮಾಡ್ತೀರಿ. ಟೀಗೆ ಅಂತ ಇನ್ನೊಂದು ನೂರು ರೂಪಾಯಿ ಜಾಸ್ತೀನೇ ಮಾಡಿ ಬಿಡಿ" ಎಂದ ಮೂದಲಿಸುತ್ತಾ.

ಫ್ರಂಟ್ ಆಫೀಸಿನ ರಶ್ಮಿಗೆ ಫೋನ್ ಮಾಡಿ ಎರಡು ಟೀಗೆ ಹೇಳಿ ಕಳಿಸಿದೆ. ಟೀ ಕುಡಿಯುವ ವರೆಗೂ ತಲೆ ಹರಟೆ ಕೊಂಕು ಹಾಸ್ಯದಲ್ಲಿ ಮಾತಾಡುತ್ತಲೇ ಇದ್ದ. ಸದ್ಯ ಎದ್ದು ಹೋದ! ನಾಳೆವರೆಗೆ ತಲೆನೋವಿಲ್ಲ ಎಂದುಕೊಂಡೆ.

ಕರಾರುವಾಕ್ಕಾಗಿ ಸಂಜೆ ನಾಲ್ಕಂದರೆ ನಾಲ್ಕು ಗಂಟೆಗೇ ಬಂದು ನನ್ನೆದುರು ಕುಳಿತ. ಅಲ್ಲಿದ್ದ ಇನ್ನೊಬ್ಬ ಕ್ಲೈಂಟನ್ನು ಕಳುಹಿಸಿ, ಇವನಿಗಾಗಿ ಮಾಡಿಟ್ಟುಕೊಂಡಿದ್ದ ಫೈಲ್‌ಗಳನ್ನು ಲ್ಯಾಪಿಯಲ್ಲಿ ತೆರೆದು ತೋರಿಸಿದೆ. ಇವಳು ಪ್ರತಿಮಾ ಅಂತ. ಮೂವತ್ತೆರೆಡು ವರ್ಷ ಮೂರು ವರ್ಷದ ಹೆಣ್ಣು ಮಗುವಿದೆ. ಪರವಾಗಿಲ್ವ" ಎಂದೆ. "ರ್ರೀ ಮಗುಗಿಗೂ ಎಲ್ಲಾ ನನ್ನ ಮೆಂಟಾಲಿಟಿಗೆ ಆಗಲ್ಲ, ಬೇರೆ ತೋರಿಸಿ" ಎಂದ.

"ಇವಳು ರಮ್ಯಾ ಅಂತ. ಮದ್ವೆಯಾಗಿ ಮೂರು ವರ್ಷಕ್ಕೆ ಡಿವೋರ್ಸ್ ಆಯ್ತು. ಈಗವಳಿಗೆ ಮೂವತ್ತು ವರ್ಷ. ಎಲ್.ಎನ್.ಟಿಯಲ್ಲಿ ಕೆಲಸ ಮಾಡ್ತಿದಾಳೆ" ಎಂದೆ. ಫೋಟೊ ನೋಡಿದ ಶಾಸ್ತ್ರ ಮಾಡಿ "ರ್ರೀ ಇದು ಯಾಕೋ ವರ್ಕ್‌ಔಟ್ ಆಗಲ್ಲ ಅನಿಸುತ್ತೆ. ಯಾರಾದ್ರೂ ಸ್ವಲ್ಪ ಮಾಡ್ ಆಗಿ ಇರೋವ್ರಿದ್ರೆ ಹೇಳಿ" ಎಂದ. ಇನ್ನೂ ಒಂದೆರೆಡು ಪ್ರೊಫೈಲ್‌ಗಳನ್ನು ತೋರಿಸಿದೆ. ಏನಾದರೂ ನೆವ ತೆಗೆದು ನಿರಾಕರಿಸುತ್ತಿದ್ದ. ಸರಿ "ಇನ್ನೆರಡು ದಿನ ಟೈಮ್ ಕೊಡಿ. ನಾವೇ ಒಂದು ಆ್ಯಡ್ ಹಾಕಿ ನೋಡ್ತೀವಿ. ರೆಸ್ಪಾನ್ಸ್ ಬರಬಹುದು" ಎಂದೆ.

"ಪ್ಲೀಸ್ ಹಾಗೆಲ್ಲ ಮಾಡಬೇಡಿ. ನಿಮ್ಗೆ ಯಾರಾರೂ ಪರ್ಸನಲ್ಲಾಗಿ ಗೊತ್ತಿರೋರಿದ್ರೆ ಹೇಳಿ" ಎಂದ. ಇದೊಳ್ಳೆ ತಲೆ ನೋವಾಯ್ತಲ್ಲ ಎನಿಸಿತು. ಸರಿ ನೋಡೋಣ ಎಂದು ಸಾಗ ಹಾಕಿದೆ. ಒಂದೆರಡು ಬೇರೆ ಗ್ರಾಹಕರ ಜೊತೆ ಬ್ಯುಸಿಯಾಗಿಬಿಟ್ಟಿದ್ದೆ. ದಿನಾ ನಾಕ್ಕೈದು ಬಾರಿ ಫೋನ್ ಮಾಡಿ "ಇನ್ನೂ ಸಿಗ್ಲಿಲ್ಲವೇನ್ರಿ? ನನ್ನ ಐದು ದಿನಗಳು ಮುಗಿದು ಹೋದ್ವು. ಇನ್ನುಳಿದಿರೋದು ಇಪ್ಪತ್ತೈದೇ ದಿನ" ಎಂದು ನೆನಪಿಸುತ್ತಿದ್ದ. ಅಂತೂ ಒಂದೆರಡು ದಿನದಲ್ಲಿ ಅವನ ಅಭಿರುಚಿಗೆ,